# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 710 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.02.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಕಾಫಿ ಬೆಳೆಯಲಾಗುತ್ತಿರುವ ಒಟ್ಟು ಭೂಮಿ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುತ್ತಿರುವ ಜಿಲ್ಲೆಗಳಲ್ಲಿ ಇರುವ ಅಂದಾಜು ವಿಸ್ತೀರ್ಣದ ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.
<table>
<tr><th rowspan="2">ಜಿಲ್ಲೆ</th><th colspan="7">ವಿಸ್ತೀರ್ಣ(ಎಕರೆ/ಗುಂಟೆ)</th></tr>
<tr><th>Upto 1 acre</th><th>More than 1 acre and upto 5 acres</th><th>More than 5 acres and upto 10 acres</th><th>More than 10 acres and upto 15 acres</th><th>More than 15 acres and upto 20 acres</th><th>More than 20 acres and upto 25 acres</th><th>Total</th></tr>
<tr><td>ಹಾಸನ</td><td>11836-22 1/4</td><td>14484-11</td><td>1940-00</td><td>367-23</td><td>245-31</td><td>474-16</td><td>29348-23 3/4</td></tr>
<tr><td>ಉಡುಪಿ</td><td>44-15</td><td>256-30</td><td>71-95</td><td>10-7</td><td>15-56</td><td>-</td><td>398-66</td></tr>
<tr><td>ಚಿಕ್ಕಮಗಳೂರು</td><td>770-28</td><td>8365-38</td><td>4619-25</td><td>1857-16</td><td>1686-03</td><td>3414-38</td><td>20844-10</td></tr>
<tr><td>ಕೊಡಗು</td><td>2033.74</td><td>22157.19</td><td>1565.72</td><td>291.88</td><td>139.41</td><td>63.00</td><td>26250.94</td></tr>
<tr><td>ಒಟ್ಟು</td><td>14686.19 1/4</td><td>45264.18</td><td>8199.32</td><td>2528.14</td><td>2085.11</td><td>3951.14</td><td>76844.33 3/4</td></tr>
</table>
ಉಳಿದ ಜಿಲ್ಲೆಗಳಲ್ಲಿ ಪ್ಲಾಂಟೇಶನ್ ಬೆಳೆಗಳು ಇರುವುದಿಲ್ಲ.</td></tr>
<tr><td>ಆ)</td><td>ಸಾವಿರಾರು ಬಡ ಕಾಫಿ ಬೆಳೆಗಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಹಿಂದಿನ ಸರ್ಕಾರವು 30-40 ಕ್ಕೂ ಹೆಚ್ಚು ವರ್ಷಗಳಿಂದ ಕಾಫಿ ಬೆಳೆಯುತ್ತಿರುವ ಸಣ್ಣ ಬೆಳೆಗಾರರಿಗೆ ಕೆಲವು ಷರತ್ತುಗಳೊಂದಿಗೆ ಭೂಮಿಯನ್ನು ಗುತ್ತಿಗೆ ನೀಡಲು ನಿರ್ಧರಿಸಿ ತರಲಾದ ಕಾಯ್ದೆಯನ್ನು ಜಾರಿಗೆ ತರುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿದೆಯೇ; ಇಲ್ಲದಿದ್ದಲ್ಲಿ ಸೂಕ್ತ ಕಾರಣವನ್ನು ನೀಡುವುದು?</td><td>ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 2ರನ್ವಯ ತೋಟಗಾರಿಕೆ (ಪ್ಲಾಂಟೇಶನ್) ಭೂಮಿ ಎಂದರೆ "ಏಲಕ್ಕಿ, ಕಾಫಿ, ಮೆಣಸು, ರಬ್ಬರ್ ಅಥವಾ ಟೀ/ಚಹಾ ಬೆಳೆಗಳನ್ನು ಬೆಳೆಸುವಂತಹ ಭೂಮಿ" ಎಂದು ವ್ಯಾಖ್ಯಾನಿಸಲಾಗಿದೆ.<br><br>ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತವಾಗಿ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುತ್ತಿರುವವರಿಗೆ ಅಂತಹ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರವು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ಕ್ಕೆ ತಿದ್ದುಪಡಿಯನ್ನು ತಂದು ಕಲಂ 94(ಇ)ನ್ನು ಸೇರ್ಪಡೆ ಮಾಡಿದೆ.<br><br>ಪ್ಲಾಂಟೇಶನ್ ಬೆಳೆಗಾರರು ಸ್ವಾಧೀನನುಭವದಲ್ಲಿರುವ ಸದರಿ ಜಮೀನಿನಲ್ಲಿ 1ನೇ ಜನವರಿ 2005ರ ಪೂರ್ವದಿಂದ ಅಂತಹ ಪ್ಲಾಂಟೇಶನ್ ಬೆಳೆಗಳ ಸಾಗುವಳಿ ಮಾಡುತ್ತಿರಬೇಕು.</td></tr>
</table>

| | | |
|---|---|---|
| | | ಒಂದು ಕುಟುಂಬಕ್ಕೆ 25 ಎಕರೆಯವರೆಗೆ 30 ವರ್ಷಗಳಿಗೆ ಮಾತ್ರ ಗುತ್ತಿಗೆ ನೀಡಲಾಗುವುದು.<br>ಪ್ಲಾಂಟೇಶನ್ ಬೆಳೆಗಳ ಭೂಮಿಗಳನ್ನು ಗುತ್ತಿಗೆ ನೀಡಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ಕ್ಕೆ ತಿದ್ದುಪಡಿ ಮಾಡುವ ಕುರಿತು ದಿನಾಂಕ: 18.05.2023ರಂದು ಕರಡು ನಿಯಮಗಳನ್ನು ಹೊರಡಿಲಾಗಿದ್ದು, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 26 ಎಲ್‌ಜಿಕ್ಯೂ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು